ಕಥೆ

# ಮಹಾತ್ಮೆ



**ಚೀಮನಹಳ್ಳಿ ರಮೇಶಬಾಬು**

ಕಲೆ: ಮುರಳೀಧರ್ ರಾಥೋಡ್

ಮೊಂಡು ಕೈಯೊಳು ಎತ್ತುಗಳ್ ಹೊಡೆಯುತಾ
ಚಂಡ ವಿಕ್ರಮರಾಜನಿರುತಿರೇ
ಅಡಿಗಡಿಗೆ ಎತ್ತುಗಳ ಬೆದರಿಸಿಕೊಂಡು

ಕಾಲ ಕಳೆಯುತ ಲೋಲವಿಕ್ರಮ
ತೇಲಿ ಮನೆಯೊಳು ಗಾಣ ಹೊಡೆಯುತಾ
ಲೀಲೆಯೊಳು ವರುಷೇಳು ಕಳೆದನು ಲೀಲೆಯಿಂದಾ

ಒಂದು ದಿವಸ ಮನಕೆ ಹರುಷವು
ಬಂದಿತಯ್ಯಾ ರಾಜಗೇ
ಅಂದು ಗಾಣದ ಮೇಲೆ ಕುಳಿತು
ತಾ ಲೀಲೆಯಿಂದಾ

ರಾಜ ವಿಕ್ರಮನಾಗ ದೀಪಕಮಾಲಾ
ರಾಗವನು ಪಾಡೆ ನಗರ ಪ್ರಕಾಶಾ...

**ಆ** ಇಳಿಸಂಜೆಯಲ್ಲಿ ಗಂಗಿರೆಡ್ಡಿ ಹೀಗೆ ಜೋರಾಗಿ ಹಾಡಿಕೊಳ್ಳುತ್ತಾ ತನ್ನ ಮಾವಿನ ತೋಪಿನಲ್ಲಿ ಸುತ್ತು ಹೊಡೆಯತೊಡಗಿದ. ಅಲ್ಲೇ ಹಾದುಹೋಗುತ್ತಿದ್ದ ಶಿವಾರೆಡ್ಡಿ, ‘ಇವನೊಬ್ಬ ಯಾವಾಕ್ಲೂ ಶನಿಮಾತ್ಮೆ ಕಥೆ ಪದ್ಯಗಳ್ನ ಹಾಡಿಕೊಂಡು ಊರಿಗೆಲ್ಲಾ ಹಿಂಸೆ ಕೊಡ್ತಾನೆ’ ಎಂದು ಗೊಣಗಿಕೊಂಡೆ ಗಂಗಿರೆಡ್ಡಿಯ ಬಳಿ ಬಂದು ನಿಂತುಕೊಂಡ. ಗಂಗಿರೆಡ್ಡಿ ಹಾಡುವುದನ್ನು ನಿಲ್ಲಿಸಿ ಶಿವಾರೆಡ್ಡಿಯ ಕಡೆಗೇ ನೋಡತೊಡಗಿದ. ಮತ್ತು ಎಂದಿನ ಅದೇ ಬೈಗುಳದ ನಿರೀಕ್ಷೆಯಲ್ಲೆ ನಿಂತುಕೊಂಡ. ‘ಪಗಲು ರಾತ್ರಿ ಇದೇ ಆಗೋಯ್ತಲ್ಲ ನಿಂದು ಗಂಗ್ರೆಡ್ಡಿ. ನೀ ಉದ್ದಾರ ಆಗಾಕಿಲ್ಲ... ಅಲ್ಲಾಲೆ ಇದ್ರಿಂದ ಏನ್ಲ ಉಪಯೋಗ್ಮು? ಕಾಸೂ ಸಿಗಲ್ಲ ಕಾಳೂ ಸಿಗಲ್ಲ’ ಎಂದು ಶಿವಾರೆಡ್ಡಿ ಶುರುವಿಟ್ಟುಕೊಂಡ.

ತಾನು ಹಾಡುವುದನ್ನು ನಿಲ್ಲಿಸಿದರೆ ತನ್ನ ಉಸಿರೇ ನಿಂತುಬಿಡುತ್ತದೆ ಎಂದು ಇವರಿಗೆಲ್ಲಾ ಹೇಗೆ ಹೇಳುವುದು? ಹೇಳಿದರೂ ವಿಚಿತ್ರವಾಗಿ ನಕ್ಕು ‘ಹುಚ್ಚ’ ಎಂದು ನುಡಿದು ಮುಂದೆ ಸಾಗುತ್ತಾರೆ. ಮತ್ತೂ ಮಾತಿಗಿಳಿದರೆ ‘ಈಗಿನ ಕಾಲ್ದಾಗೆ ನಿನ್ಯಾರ್ಲ ಕೇಳ್ತಾರೆ? ಕಾಲಕ್ಕೆ ತಗಿನಟ್ಲೆ ಅಡುಗಿಡಬೇಕು. ಲೇದಂದ್ರೆ ನೀಸೋಗ್ತೀಯ’ ಎಂದು ಮುಂದುವರೆಸುತ್ತಾರೆ ಎಂದುಕೊಂಡ. ಆದ್ರೂ